2019 ಕ.ತೀ.ವ 756

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ಎಂ.ಪಿ. ಗೌಡರ್ –ವಿರುದ್ಧ– ಐ.ಜಿ. ಮುಖ್ಯ ಸುರಕ್ಷತಾ ಆಯುಕ್ತರು, ರೈಲ್ವೆ ಸುರಕ್ಷತಾ ದಳ, ಹುಬ್ಬಳ್ಳಿ ಮತ್ತು ಇತರರು*

ರೈಲ್ವೆ ಸುರಕ್ಷತಾ ದಳ ಅಧಿನಿಯಮ

ಪ್ರಸ್ತುತ ಪ್ರಕರಣದಲ್ಲಿ ಅರ್ಜಿದಾರನು ರೈಲ್ವೆ ಸುರಕ್ಷತಾ ದಳದಲ್ಲಿ ಕಾನ್‌ಸ್ಟೇಬಲ್ ಎಂದು ನೇಮಕಗೊಂಡು, ನಂತರ ಕೆಲಸಕ್ಕೆ ಸತತವಾಗಿ ಗೈರುಹಾಜರಾಗಿರುವಂತಹ ಸಂದರ್ಭದಲ್ಲಿ ಆತನ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸಿ, ಆತನನ್ನು ಹುದ್ದೆಯಿಂದ ತೆಗೆದುಹಾಕಲಾಗಿತ್ತು. ಆ ಆದೇಶ ಮತ್ತು ಮೇಲ್ಮನವಿ ಪ್ರಾಧಿಕಾರ ಮತ್ತು ಶಿಸ್ತು ಪ್ರಾಧಿಕಾರಗಳು ಮಾಡಿದ ಆದೇಶಗಳನ್ನು ಸಹ ಈ ಮೊಕದ್ದಮೆಯಲ್ಲಿ ಅರ್ಜಿದಾರನು ಪ್ರಶ್ನಿಸಿದ್ದಾನೆ.

ಅರ್ಜಿದಾರನ ವಾದವೇನೆಂದರೆ ಮೇಲ್ಮನವಿ ಪ್ರಾಧಿಕಾರ ಮತ್ತು ಶಿಸ್ತು ಪ್ರಾಧಿಕಾರಗಳು ಅರ್ಜಿದಾರನ ವಾದವನ್ನು ಪರಿಗಣಿಸದೆ ಕೇವಲ ತಾಂತ್ರಿಕ ಕಾರಣಗಳಿಗಾಗಿ ಆತನ ಅರ್ಜಿಯನ್ನು ತಿರಸ್ಕರಿಸಿದ್ದಾರೆ ಎಂದು ವಾದಿಸಿದ್ದಾನೆ.

ಪ್ರತ್ಯರ್ಜಿದಾರರ ಪರವಾಗಿ ಈ ವಾದಗಳನ್ನು ವಿರೋಧಿಸಿ ಅರ್ಜಿದಾರನು ಮೇಲಧಿಕಾರಿಯಿಂದ ಆಗುವ ಕಿರುಕುಳ ಮತ್ತು ತನ್ನ ತಂದೆಯ ಆರೋಗ್ಯದ ಸಮಸ್ಯೆಗಳಿಂದಾಗಿ ತಾನು ಗೈರುಹಾಜರಾಗಿರುವುದಾಗಿ ಕೇವಲ ಹೇಳಿಕೆಗೆ ಮಾತ್ರ

*ರಿಟ್ ಅರ್ಜಿ ಸಂಖ್ಯೆ: 111626/2015, ದಿನಾಂಕ 14ನೇ ಮಾರ್ಚ್, 2018.

**ಸೀಮಿತವಾಗಿ ಯಾವುದೇ ದಾಖಲಾತಿಗಳನ್ನು ನೀಡಿಲ್ಲ ಮತ್ತು ರೈಲ್ವೆ ಸುರಕ್ಷತಾ ದಳವು ಒಂದು ಶಿಸ್ತಿನ ದಳವಾಗಿದ್ದು ಯಾವುದೇ ತರಹದ ಅಶಿಸ್ತನ್ನು ಸಹಿಸಲಾಗದು ಎಂದು ವಾದಿಸಲಾಗಿದೆ.**

**ಮಾನ್ಯ ನ್ಯಾಯಾಲಯವು ಎರಡೂ ಕಡೆಯ ವಾದಗಳನ್ನು ಆಲಿಸಿ ಅರ್ಜಿದಾರನ ವಾದಗಳಲ್ಲಿ ಯಾವುದೇ ಹುರುಳಿಲ್ಲವೆಂದು ತೀರ್ಮಾನಿಸಿ ಶಿಸ್ತು ಪ್ರಾಧಿಕಾರವು ಆತನನ್ನು ಹುದ್ದೆಯಿಂದ ವಜಾಗೊಳಿಸಿ ಮಾಡಿರುವ ಆದೇಶವನ್ನು ಎತ್ತಿಹಿಡಿದಿದೆ.**

***ಉಲ್ಲೇಖಿಸಲಾದ ಮೊಕದ್ದಮೆ*** ***ಪ್ಯಾರಾದಲ್ಲಿ***

*1. 2008–III ಎಲ್‌ಎಲ್‌ಜೆ 353*
*ಭಾರತ ವಿಮಾನ ನಿಲ್ದಾಣ ಪ್ರಾಧಿಕಾರ ಮತ್ತು ಇತರರು*
*–ವಿರುದ್ಧ– ಶಂಬುನಾಥ ದಾಸ್ ಅಲಿಯಾಸ್*
*ಎಸ್.ಎನ್.ದಾಸ್* *(ಉಲ್ಲೇ) 12*

ಅರ್ಜಿದಾರರ ಪರ: ಶ್ರೀ ಎಚ್.ಎಂ. ಧರಿಗೊಂಡ್, ವಕೀಲರು.
ಪ್ರತ್ಯರ್ಜಿದಾರರ ಪರ: ಶ್ರೀ ಎಂ.ಬಿ. ಕಣವಿ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ:**

1. ಅರ್ಜಿದಾರರ ಪರ ಮಾನ್ಯ ವಕೀಲರ ಮತ್ತು ಪ್ರತ್ಯರ್ಜಿದಾರರ ಪರ ಮಾನ್ಯ ವಕೀಲರ ವಾದಗಳನ್ನು ಆಲಿಸಲಾಗಿದೆ ಹಾಗೂ ದಾಖಲೆಗಳನ್ನು ಅವಗಾಹಿಸಲಾಗಿದೆ.

2. ನಿರ್ವಿವಾದಿತ ಸಂಗತಿಗಳೆಂದರೆ, ಅರ್ಜಿದಾರನು 01.09.1998ರಿಂದ ರೈಲ್ವೆ ಸುರಕ್ಷತಾ ದಳದಲ್ಲಿ ಒಬ್ಬ ಕಾನ್ಸ್‌ಟೇಬಲ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಇವರು ದಿನಾಂಕ: 30.09.2009ರಿಂದ 11.03.2010ರ ವರೆಗೆ ಕರ್ತವ್ಯಕ್ಕೆ ಗೈರುಹಾಜರಾಗಿದ್ದನು. ಆದುದರಿಂದ ಇವರ ವಿರುದ್ಧ ಆರೋಪಗಳ ಪಟ್ಟಿಯನ್ನು ಹೊರಡಿಸಲಾಯಿತು ಹಾಗೂ ಅರ್ಜಿದಾರನು ದಿನಾಂಕ: 12.07.2010ರ ಎದುರುದಾರರ ಹೇಳಿಕೆಯ ಮೂಲಕ ತಮ್ಮ ವಿರುದ್ಧ ಸಲ್ಲಿಸಿದ ಸದರಿ ಆರೋಪಗಳಿಗೆ ಪ್ರತಿಯಾಗಿ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ. ದಿನಾಂಕ: 11.03.2010ರಂದು ಆರೋಪಗಳನ್ನು ರೂಪಿಸಲಾಯಿತು. ವಿಚಾರಣೆಯನ್ನು ನಡೆಸಲಾಯಿತು ಹಾಗೂ ಮೂರನೆಯ ಪ್ರತ್ಯರ್ಜಿದಾರರು, ವಿಚಾರಣಾಧಿಕಾರಿಯ ವರದಿಯನ್ನು ಸ್ವೀಕರಿಸಿದ ನಂತರ ದಿನಾಂಕ: 7.9.2010ರಂದು ಅರ್ಜಿದಾರನ ವಿವರಣೆ ಕೇಳಿ ಮತ್ತೊಂದು ನೋಟೀಸನ್ನು ಸಹ ನೀಡಿದ್ದಾರೆ. ಅರ್ಜಿದಾರನು ಸಹಾ ವಿವರಣೆಯನ್ನು ನೀಡಿದ್ದಾನೆ. ದಿನಾಂಕ: 22.10.2010ರ ಆದೇಶಗಳಲ್ಲಿರುವಂತೆ ಶಿಸ್ತು ಪ್ರಾಧಿಕಾರವು ಅವನನ್ನು ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸುವ ಆದೇಶವನ್ನು ಹೊರಡಿಸಿದೆ.

3. ಅಪೀಲು ಪ್ರಾಧಿಕಾರವನ್ನು ಸಂಪರ್ಕಿಸುವುದಕ್ಕೆ ಬದಲಾಗಿ ಅರ್ಜಿದಾರನು ಶಿಸ್ತುಪ್ರಾಧಿಕಾರದಿಂದ ಹೊರಡಿಸಲಾದ ಸದರಿ ದಂಡನೆ ಆದೇಶವನ್ನು ಪ್ರಶ್ನಿಸಿ ರಿಟ್ ಅರ್ಜಿ ಸಂಖ್ಯೆ: 68743/2010 ರಿಟ್ ಅರ್ಜಿಯ ಮೂಲಕ ಈ ನ್ಯಾಯಾಲಯಕ್ಕೆ ಬಂದಿದ್ದಾನೆ. ದಿನಾಂಕ: 25.04.2014ರ ಆದೇಶವನ್ನು ಗಮನಿಸಿ, ಈ ನ್ಯಾಯಾಲಯವು ಮೇಲ್ಮನವಿಯ ಮೂಲಕ, ಸಕ್ಷಮ ಪ್ರಾಧಿಕಾರವನ್ನು ಸಂಪರ್ಕಿಸಲು ಅರ್ಜಿದಾರನಿಗೆ ಸ್ವಾತಂತ್ರ್ಯದೊಂದಿಗೆ ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

4. ಸಂಖ್ಯೆ:ಸಿಎಕ್ಸ್‌ಸಿ.ಪಿ. 227/ಅಪೀಲು/ಎಂಪಿಜಿ/ಇಎಕ್ಸ್. ಸಿಒಎನ್/ಯುಬಿಎಲ್/03/14ರಲ್ಲಿ ಅಪೀಲನ್ನು ಸಲ್ಲಿಸಲಾಯಿತು. ದಿನಾಂಕ: 15.10.2014ರ ಆದೇಶಗಳನ್ನು ಗಮನಿಸಿ, ಶಿಸ್ತು ಪ್ರಾಧಿಕಾರದ ಆದೇಶವನ್ನು ಎತ್ತಿ ಹಿಡಿದು ಅರ್ಜಿದಾರರ ಸದರಿ ಅಪೀಲನ್ನು ವಜಾಗೊಳಿಸಲಾಯಿತು. ಅಪೀಲು ಪ್ರಾಧಿಕಾರದ ಆದೇಶದಿಂದ ಬಾಧಿತನಾದ ಅರ್ಜಿದಾರನು ರೈಲ್ವೆ ಸುರಕ್ಷತಾ ದಳದ ನಿಯಮಗಳು,

1987ರ ನಿಯಮ 219ರ ಅಡಿಯಲ್ಲಿ ಪುನರೀಕ್ಷಣಾ ಅರ್ಜಿ ಮೂಲಕ 2ನೇ ಪ್ರತ್ಯರ್ಜಿದಾರರನ್ನು ಸಹ ಸಂಪರ್ಕಿಸಿದನು. ದಿನಾಂಕ: 30.04.2015ರ ಆದೇಶಗಳನ್ನು ಗಮನಿಸಿ ಸದರಿ ಪುನರೀಕ್ಷಣಾ ಅರ್ಜಿಯನ್ನು ಕೂಡ ವಜಾಗೊಳಿಸಲಾಯಿತು.

5. ವಿಚಾರಣಾ ಅಧಿಕಾರಿ, ಶಿಸ್ತುಪ್ರಾಧಿಕಾರ, ಅಪೀಲು ಪ್ರಾಧಿಕಾರ ಹಾಗೂ ಪುನರೀಕ್ಷಣಾ ಪ್ರಾಧಿಕಾರದಿಂದ ನೀಡಲಾದ, ಈ ಮೇಲೆ ಹೇಳಲಾದ ಸಮವರ್ತಿ ಅಭಿಪ್ರಾಯೋಕ್ತಿಗಳು ಹಾಗೂ ನಿರ್ಣಯಗಳಿಂದ ಬಾಧಿತನಾಗಿ ಪ್ರಸ್ತುತ ಅರ್ಜಿಯನ್ನು ದಾಖಲು ಮಾಡಿದ್ದಾನೆ.

6. ವಿಚಾರಣಾ ಅಧಿಕಾರಿಯಾಗಲೀ ಅಥವಾ ಶಿಸ್ತುಪ್ರಾಧಿಕಾರವಾಗಲೀ ಅಪೀಲು ಪ್ರಾಧಿಕಾರ ಹಾಗೂ ಪುನರೀಕ್ಷಣಾ ಪ್ರಾಧಿಕಾರ ಕೂಡಾ ಅರ್ಜಿದಾರನ ಕುಂದು ಕೊರತೆಗಳನ್ನು ಪರಿಗಣಿಸಿಲ್ಲ ಎಂದು ಮಾನ್ಯ ನ್ಯಾಯವಾದಿಗಳು ಬಲವಾಗಿ ವಾದಿಸಿದ್ದಾರೆ. ಅಪೀಲು ಹಾಗೂ ಪುನರೀಕ್ಷಣಾ ಪ್ರಾಧಿಕಾರಗಳು ಅಪೀಲು ಸಲ್ಲಿಸುವಲ್ಲಿ ಉಂಟಾದ ವಿಳಂಬಕ್ಕೆ ಸಂಬಂಧಿಸಿದಂತೆ ಸುಮ್ಮನೆ ಅತ್ತಿಂದಿತ್ತ ಓಡಾಡಿಸಿದ್ದಾರೆ ಹಾಗೂ ಸರಿಯಾದ ಕಾರಣಗಳನ್ನು ಕೊಡದೆ ಅಪೀಲನ್ನು ವಜಾಗೊಳಿಸಿದ್ದಾರೆ. ಮೇಲಧಿಕಾರಿಯಿಂದ ಅವಮಾನಗೊಂಡು ಕರ್ತವ್ಯ ತ್ಯಜಿಸಿ, ಹಾಜರಾಗದೆ ಉಳಿದಿರುವ ಅರ್ಜಿದಾರನ ಪ್ರತಿವಾದವನ್ನು ಸರಿಯಾಗಿ ಪರಿಗಣಿಸಲಾಗಿಲ್ಲ ಹಾಗೂ ಅರ್ಜಿದಾರನು, ತನ್ನ ತಂದೆ ಪಾರ್ಶ್ವವಾಯು ಆಘಾತಕ್ಕೊಳಗಾಗಿದ್ದು, ಅವರನ್ನು ಆರೈಕೆ ಮಾಡಲು ಯಾರೂ ಇಲ್ಲದ ಕಾರಣ, ತಾನು ಆರೈಕೆ ಮಾಡುವ ಉದ್ದೇಶಕ್ಕಾಗಿ ಕರ್ತವ್ಯಕ್ಕೆ ಗೈರುಹಾಜರಾಗಿದ್ದಾರೆಂದು ಆರೋಪ ಪಟ್ಟಿಗೆ, ಆಕ್ಷೇಪಣಾ ಹೇಳಿಕೆಯಲ್ಲಿ ವಾದಿಸಲಾಗಿದೆ.

7. ವಿಚಾರಣಾ ವರದಿ ಹಾಗೂ ಅಪೀಲಿನ ಪ್ರಾಧಿಕಾರ ಮತ್ತು ಪುನರೀಕ್ಷಣಾ ಪ್ರಾಧಿಕಾರಗಳ ಆದೇಶ ಇವುಗಳ ಸೂಕ್ಷ್ಮ ಅವಗಾಹನೆಯಿಂದ ಅಪೀಲು ಪ್ರಾಧಿಕಾರವು ವಿಳಂಬದ ಆಧಾರದ ಮೇಲೆ ಸಹ ಅಪೀಲನ್ನು ವಜಾ ಮಾಡಿದ್ದಾಗ್ಯೂ, ಆದರೆ

ಅರ್ಜಿದಾರನಿಂದ ಮಂಡಿಸಲ್ಪಟ್ಟ ಮೇಲಿನ ಹೇಳಿಕೆಗಳ ಆಧಾರದ ಮೇಲೆ ಸಹ ಅರ್ಜಿಯನ್ನು ಪರಿಗಣಿಸಲಾಗಿದೆ. ವಾಸ್ತವಿಕವಾಗಿ ಶಿಸ್ತು ಪ್ರಾಧಿಕಾರವು ಸಹ ಉಲ್ಲೇಖಿಸಿದ ವಾಸ್ತವಿಕ ಅಂಶವನ್ನು ಪರಿಗಣಿಸಿ ಸಂಭಾವ್ಯತೆಗಳ ಬಾಹುಳ್ಯದಿಂದ ಕೂಡ ಅರ್ಜಿದಾರನ ಪ್ರತಿವಾದವನ್ನು ಪರಿಗಣಿಸಿಲ್ಲ ಎಂದು ನಿರ್ಣಯ ನೀಡಿದೆ.

8. ಶಿಸ್ತು ಪ್ರಾಧಿಕಾರ, ಅಪೀಲು ಪ್ರಾಧಿಕಾರ ಹಾಗೂ ಪುನರೀಕ್ಷಣಾ ಪ್ರಾಧಿಕಾರಗಳ ಆದೇಶದ ಸೂಕ್ಷ್ಮ ಅವಗಾಹನೆಯಿಂದ, ಅರ್ಜಿದಾರನು ತನ್ನ ಹೇಳಿಕೆಯಲ್ಲಿ ಮೇಲಧಿಕಾರಿಗಳ ಕಿರುಕುಳದಿಂದ ತಾನು ಕರ್ತವ್ಯಗಳನ್ನು ಬಹಿಷ್ಕರಿಸಿರುವರೆಂದು ಪ್ರತಿವಾದ ಮಾಡಿದ್ದಾಗ್ಯೂ, ಕರ್ತವ್ಯ ತ್ಯಜಿಸುವವರೆಗೆ ಮೇಲಧಿಕಾರಿಗಳ ವಿರುದ್ಧ ಏನು ಕ್ರಮ ಕೈಗೊಂಡಿದ್ದಾರೆ ಎನ್ನುವುದು, ಅಲ್ಲದೇ ಇದರ ಕುರಿತು ಮೇಲಧಿಕಾರಿಗಳಿಗೆ ತಿಳಿಸುವ ಪ್ರಯತ್ನವನ್ನೂ ಮಾಡಿಲ್ಲದಿರುವುದು. ಅಲ್ಲದೇ ರೈಲ್ವೆ ಸುರಕ್ಷತಾ ದಳದ ಮಹಾ ನಿರ್ದೇಶಕರು ಅಥವಾ ಮಹಾ ನಿರೀಕ್ಷಕರಂತಹ ರೈಲ್ವೆ ಸುರಕ್ಷತಾ ದಳದ ಅತ್ಯುನ್ನತ ಅಧಿಕಾರಿಗಳಿಗೆ ಕನಿಷ್ಟ ಯಾವುದೇ ಮನವಿಯನ್ನು ಮಾಡಿದ್ದಾರೆಯೇ? ಅಥವಾ ಇದನ್ನು ಪ್ರಾಧಿಕಾರದ ಗಮನಕ್ಕೆ ತರಲು ಯಾವ ಪ್ರಯತ್ನಗಳನ್ನು ಮಾಡಿದ್ದಾರೆ? ತಮ್ಮ ಹೇಳಿಕೆಯಲ್ಲಿಯೂ ಅದರ ಕುರಿತು ಉಲ್ಲೇಖವಿಲ್ಲ ಎನ್ನುವುದು ಸ್ಪಷ್ಟವಾಗಿದೆ. ಅರ್ಜಿದಾರನ ಪ್ರತಿವಾದವನ್ನು ಪುಷ್ಟೀಕರಿಸುವ ದೃಷ್ಟಿಯಿಂದ, ವಾಸ್ತವವಾಗಿ ಯಾವ ಅಧಿಕಾರಿಗಳು ಕಿರುಕುಳ ನೀಡಿದ್ದು, ಯಾವ ದಿನಾಂಕ, ಸ್ಥಳ ಇತ್ಯಾದಿಯ ಬಗ್ಗೆ ಯಾವುದೇ ನಿರ್ದಿಷ್ಟ ಆಪಾದನೆಯಿಲ್ಲ ಮತ್ತು ಯಾವುದೂ ಅವನ ಹೇಳಿಕೆಯಲ್ಲಿ ಸ್ಪಷ್ಟವಿಲ್ಲ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಅಲ್ಲದೇ ಅರ್ಜಿದಾರನು ತನ್ನ ಹೇಳಿಕೆಯಲ್ಲಿ ಮೇಲಧಿಕಾರಿಗಳ ವಿಷಯದಲ್ಲಿ ಯಾವ ಬಗೆಯ ಕಿರುಕುಳದಿಂದ ಬಳಲಿದರು ಎನ್ನುವ ಬಗ್ಗೆ ಒಂದೇ ಒಂದು ಪದವನ್ನು ಸಹ ಉಚ್ಚರಿಸಿಲ್ಲ.

9. ಅರ್ಜಿದಾರನ ಇನ್ನೊಂದು ಪ್ರತಿವಾದವೆಂದರೆ, ಅವನ ತಂದೆ ಪಾರ್ಶ್ವವಾಯುವಿನಿಂದ ಬಳಲುತ್ತಿದ್ದದ್ದು ಹಾಗೂ ತಂದೆಯನ್ನೂ ನೋಡಿಕೊಳ್ಳಲು

ಮನೆಯಲ್ಲಿ ಯಾರೂ ಇಲ್ಲದಿದ್ದುದು ಇದು ಕೂಡಾ ಸಕ್ಷಮ ಪ್ರಾಧಿಕಾರಗಳ ಮುಂದೆ ಯಾವುದೇ ಆಧಾರ ಇಲ್ಲದಿರುವುದಾಗಿದೆ. ಪ್ರತಿವಾದವನ್ನು ಸಮರ್ಥಿಸಲು ಯಾವುದೇ ಸಾಕಷ್ಟು ಹಾಗೂ ತೃಪ್ತಿದಾಯಕ ಆಧಾರವಿಲ್ಲವೆಂಬುದನ್ನೂ ಎಲ್ಲಾ ಪ್ರಾಧಿಕಾರಗಳು ಗಮನಿಸಿವೆ. ಆದುದರಿಂದ, ಸಮಂಜಸ ಸಾಕ್ಷ್ಯಾಧಾರಗಳಿಲ್ಲದ ಕೇವಲ ಮೇಲಧಿಕಾರಿಗಳ ವಿರುದ್ಧ ಆಪಾದನೆ ಹಾಗೂ ತಮ್ಮ ತಂದೆಗೆ ಅನಾರೋಗ್ಯವೆಂಬ ಪ್ರತಿವಾದದಿಂದ ಅಂಥ ಪ್ರತಿವಾದಗಳನ್ನು ಬಹಳ ಸಾಧಾರಣವಾಗಿ ಮಾಡಲಾಗಿದೆಯೇ ಅಥವಾ ನಿಜವಾಗಿಯೇ? ಎಂಬುದನ್ನು, ಅಲ್ಲದೇ ಇವುಗಳಲ್ಲಿ ಯಾವುದೇ ಸತ್ಯವಿದೆ ಎಂಬುದನ್ನು ನಂಬಲು ಕಷ್ಟವಾಗಿವೆ. ರಿಟ್ ಅರ್ಜಿ ದಾಖಲಿಸುವಾಗ ಈ ಹಿಂದೆ ಅಥವಾ ಸದ್ಯದಲ್ಲಿ ಮೇಲಧಿಕಾರಿಯಿಂದ ಯಾವುದೇ ಕಿರುಕುಳದ ಅಥವಾ ತಮ್ಮ ತಂದೆ ಪಾರ್ಶ್ವವಾಯುವಿನಿಂದ ಬಳಲುತ್ತಿದ್ದ ಆ ನಿರ್ದಿಷ್ಟ ಸಮಯದಲ್ಲಿ ಅದನ್ನು ತೋರಿಸಲು ಯಾವುದೇ ಆಧಾರಗಳನ್ನು ಒದಗಿಸಿಲ್ಲ.

10. ಆದುದರಿಂದ ಒಬ್ಬ ಕರ್ತವ್ಯನಿಷ್ಠ ಸೇವಕನಾಗಿ ಅರ್ಜಿದಾರನು ತನ್ನ ಕರ್ತವ್ಯ ನಿರ್ವಹಿಸುವುದನ್ನು ಮುಕ್ತವಾಗಿ ತಡೆಯಲಾಗಿದೆಯೆಂದು ತೋರಿಸಲು ಯಾವುದೇ ನೈಜವಾದ ಕಾರಣಗಳನ್ನು ವ್ಯಕ್ತಪಡಿಸುವ ಯಾವುದೇ ಆಧಾರವನ್ನು ನೀಡಿಯೇ ಇಲ್ಲ. ಆರಕ್ಷಕ ಒಂದು ಸಾಮಾನ್ಯ ಹುದ್ದೆಯಲ್ಲ, ಅದು ಅವಶ್ಯಕ ಸೇವೆಗಳಲ್ಲಿ ಒಂದೆಂದು ಗುರುತಿಸಲ್ಪಟ್ಟಿದೆ. ಆದುದರಿಂದ ಆರಕ್ಷಕ ಬಲ ದಲ್ಲಿ ಕಾರ್ಯ ನಿರ್ವಹಿಸುವ ಜನರು ಕಚೇರಿಯ ನಿಯಮ ನಿಬಂಧನೆಗಳಿಗೆ ಹಾಗೂ ಮೇಲಧಿಕಾರಿಗಳ ನಿರ್ದೇಶನಗಳಿಗೆ ಬದ್ಧರಾಗಿರಬೇಕು.

11. ಕರ್ತವ್ಯಕ್ಕೆ ಗೈರು ಹಾಜರಾಗಿರುವುದು, ಇವರು ತಮ್ಮ ನಿಯಮಿತ ಕರ್ತವ್ಯಕ್ಕೆ ಬದ್ಧರಾಗಿಲ್ಲವೆಂದು ತೋರಿಸುತ್ತದೆ. ಸ್ವತಃ ತಮ್ಮ ಅನಾರೋಗ್ಯದ ಬಗ್ಗೆ ಕೂಡಾ ಅವರು ಎಂದೂ ಮನವಿ ಮಾಡಿಕೊಂಡಿಲ್ಲ. ಅಲ್ಲದೆ, ಪ್ರತ್ಯರ್ಜಿದಾರರು ನೋಟೀಸ್ ಜಾರಿಗೊಳಿಸಿದಾಗ್ಯೂ ಅವರು ಎಂದೂ ತಮ್ಮ ಕರ್ತವ್ಯಕ್ಕೆ ಹಾಜರಾಗಿಲ್ಲ. ದಿನಾಂಕ 20.02.2010ನೇ ದಿನಾಂಕದಂದು ಇಂತಹ ಒಂದು ನೋಟೀಸ್ ಸ್ವೀಕರಿಸಿದ್ದಾನೆಂದು

ವಾಸ್ತವವಾಗಿ ತಾನೇ ಒಪ್ಪಿಕೊಂಡಿದ್ದಾನೆ. ಇಷ್ಟೆಲ್ಲದರ ಹೊರತಾಗ್ಯೂ, ಇವರು ತಮ್ಮ ಕರ್ತವ್ಯಕ್ಕೆ ಹಾಜರಾಗಲು ಯಾವುದೇ ಪ್ರಯತ್ನಗಳನ್ನು ಮಾಡಿಲ್ಲ. ಆದುದರಿಂದ ವಾಸ್ತವಾಂಶಗಳ ಆಧಾರದ ಮೇಲೆ ಈ ನ್ಯಾಯಾಲಯದ ಸಮ್ಮುಖದಲ್ಲಿ ಅವರು ಯಾವುದೇ ಪರಿಹಾರೋಪಾಯಕ್ಕೆ ಹಕ್ಕುದಾರರಲ್ಲ ಎನ್ನುವುದು ನನ್ನ ಅಭಿಪ್ರಾಯ.

12. ಅರ್ಜಿದಾರನ ಪರ ಮಾನ್ಯ ನ್ಯಾಯವಾದಿಗಳು ***ಭಾರತ ವಿಮಾನ ನಿಲ್ದಾಣ ಪ್ರಾಧಿಕಾರ ಮತ್ತು ಇತರರು –ವಿರುದ್ಧ – ಶಂಬುನಾಥ ದಾಸ್ ಅಲಿಯಾಸ್ ಎಸ್.ಎನ್.ದಾಸ್***[1] ಸರ್ವೋಚ್ಚ ನ್ಯಾಯಾಲಯದ ನಿರ್ಧಾರದ ಮೇಲೆ ಅವಲಂಬಿಸುತ್ತಾರೆ. ಇದರಲ್ಲಿ ಸರ್ವೋಚ್ಚ ನ್ಯಾಯಾಲಯವು ನೌಕರನು ಸುಮಾರು 15 ವರ್ಷಗಳು ಕರ್ತವ್ಯಕ್ಕೆ ಗೈರು ಹಾಜರಾಗಿದ್ದು, ಕರ್ತವ್ಯಕ್ಕೆ ಮರು ನಿಯೋಜನೆಯ ಆದೇಶದೊಂದಿಗೆ ಶೇ.50ರಷ್ಟು ಹಿಂದಿನ ವೇತನ, ಎಂಬುದನ್ನು ಮಾರ್ಪಡಿಸಿ ನೌಕರನು ಹಿಂದಿನ ವೇತನಕ್ಕಾಗಿ ಹಕ್ಕುದಾರನಲ್ಲವೆಂದು ಆದೇಶಿಸಿತು. ಏನೇ ಆದರೂ ಕರ್ತವ್ಯಕ್ಕೆ ಮರು ನಿಯೋಜನೆ ಆದೇಶಕ್ಕೆ ತೊಂದರೆಯಾಗಿಲ್ಲ. ಸದರಿ ಪ್ರಕರಣದ ಮುದ್ರಣ ಅಚ್ಚಿನ ಅವಗಾಹನೆಯ ನಂತರವೂ ನೌಕರನು, ತನ್ನ ಹಾಗೂ ತನ್ನ ಅಜ್ಜಿಯ ಅನಾರೋಗ್ಯದ ಕಾರಣಕ್ಕೆ ಗೈರುಹಾಜರಾಗಿಯೇ ಉಳಿದನು. ಸರ್ವೋಚ್ಚ ನ್ಯಾಯಾಲಯದ ಹೇಳಿಕೆಯ ಪ್ರಕಾರ ನೌಕರನು ತನ್ನ ಅನಾರೋಗ್ಯದ ಕಾರಣ ಗೈರುಹಾಜರಾಗಿ ಉಳಿದು, ವೈದ್ಯಕೀಯ ಕಾರಣವೊಡ್ಡಿ ರಜೆ ವಿಸ್ತರಣೆಗಾಗಿ ಮನವಿ ಮಾಡಿದನು. ವಾಸ್ತವವಾಗಿ ಇಲಾಖೆಯು ಸಹ ಅವನನ್ನು 'ಕಲ್ಕತ್ತಾದ ಮೆಡಿಕಲ್ ಬೋರ್ಡ್'ಗೆ ಕಳುಹಿಸಿತು. ಕರ್ತವ್ಯ ನಿರ್ವಹಿಸಲು ಅವನು ದೈಹಿಕವಾಗಿ ಅರ್ಹನಿದ್ದಾನೆಂದು ವರದಿ ದೊರಕಿದ ನಂತರ ಕರ್ತವ್ಯದಿಂದ ವಜಾಗೊಳಿಸುವ ಆದೇಶ ಜಾರಿಗೊಳಿಸಲಾಯಿತು ಎಂದು ಕಂಡು ಬಂದಿದೆ. ಸರ್ವೋಚ್ಚ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ಸಾಬೀತಾದ ಕಾರಣಗಳಿವೆಯೆಂದು ನಿರ್ಣಯಿಸಿ ಈ ರೀತಿಯಾಗಿ ಅಭಿಪ್ರಾಯಪಟ್ಟಿತು. ಈ ಪ್ರಕರಣವು ಯಾವ ಕಾನೂನನ್ನು ಆಧರಿಸಿಲ್ಲ, ಆದರೆ ನೈಜ ಸಂಗತಿಗಳ ಮೇಲೆ ನಿರ್ಧರಿಸಲಾಗಿದೆ. ಮೇಲೆ ಉಲ್ಲೇಖಿಸಿದ ಸಂಗತಿ

1. 2008 III ಎಲ್‌ಎಲ್‌ಜೆ 353

ಹಾಗೂ ಸಂದರ್ಭಗಳ ಆಧಾರದ ಮೇಲೆ, ಶಿಸ್ತು ಪ್ರಾಧಿಕಾರ, ಪ್ರಥಮ ಅಪೀಲು ಪ್ರಾಧಿಕಾರ ಅಲ್ಲದೇ ಪುನರೀಕ್ಷಣಾ ಪ್ರಾಧಿಕಾರಗಳು ಒಪ್ಪಿಸಿದ ಸಮವರ್ತಿ ನಿರ್ಣಯಗಳಿಗೆ ಮಧ್ಯ ಪ್ರವೇಶಿಸಲು ಯಾವುದೇ ಪ್ರಬಲವಾದ ಕಾರಣಗಳು ನನಗೆ ಕಂಡು ಬಂದಿಲ್ಲ.

13. ಶಿಸ್ತುಪ್ರಾಧಿಕಾರದಿಂದ ವಿಧಿಸಲ್ಪಟ್ಟ ದಂಡ ಕಡಿಮೆ ಮಾಡಲು ಕೂಡ ಅರ್ಜಿದಾರನ ಪರ ಸಾಬೀತಾದ ಆಧಾರಗಳು ಇಲ್ಲ. ಆದುದರಿಂದ, ರಿಟ್ ಅರ್ಜಿಯು ಗುಣಾರ್ಹತೆಗಳಿಲ್ಲದ್ದು ಹಾಗೂ ಇದು ವಜಾಗೊಳ್ಳಲು ಯೋಗ್ಯವಿದ್ದು, ಅದಕ್ಕನುಸಾರವಾಗಿ ವಜಾಗೊಳಿಸಲಾಗಿದೆ.